**Code No. 16 Z**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ — ಪ್ರವೀಣ ದರ್ಜೆ — ತೃತೀಯ ಪತ್ರಿಕೆ

## ಸಂಕ್ಷೇಪಿಸುವಿಕೆ

ಜೂನ್, 2016

ವೇಳೆ { ಉಕ್ತಲೇಖನ : 10 ನಿಮಿಷಗಳು
ವಿಸ್ತರಣೆ : 1 ಗಂಟೆ 30 ನಿಮಿಷಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಮುನ್ನೂರು (300) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.

2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳು ಶೀಘ್ರಲಿಪಿಯನ್ನು ಪರೋಕ್ಷ ವಿಧಾನದಲ್ಲಿ ಸುಮಾರು 1000 ಅಕ್ಷರಗಳಿಗೆ ಲಿಪಿ ಬರಹದಲ್ಲಿ ಸಂಕ್ಷೇಪಿಸಬೇಕೆಂದು ಅಭ್ಯರ್ಥಿಗಳಿಗೆ ಸೂಚನೆ ನೀಡತಕ್ಕದ್ದು

---

ಕರ್ನಾಟಕ ರಾಜ್ಯಪಾಲರು ರಾಜ್ಯ ವಿಧಾನ ಮಂಡಲದಲ್ಲಿ ಮಾಡಿದ ಭಾಷಣವನ್ನು ಸ್ವಾಗತ ಮಾಡುತ್ತಾ ಮಾನ್ಯ ಸದಸ್ಯರು ಈ ರೀತಿ ಭಾಷಣವನ್ನು ಮಾಡಿದರು.

ಮಾನ್ಯ ಸಭಾಧ್ಯಕ್ಷರೇ,

ರಾಜ್ಯದಲ್ಲಿ ಕನ್ನಡವನ್ನು ಆಡಳಿತ
$\frac{1}{4}$ ಭಾಷೆ/ಯಾಗಿ ಜಾರಿಗೆ ತಂದಿರುವ ಬಗ್ಗೆ ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಸರ್ಕಾರವು ಐವತ್ತು ವರ್ಷಗಳ ಹಿಂದೆಯೇ ರಾಜ್ಯಭಾಷಾ ಅಧಿನಿಯಮವನ್ನು ಅಂಗೀಕರಿಸಿ ಸುಮಾರು
$\frac{1}{2}$ ಮುನ್ನೂರಾ ಹತ್ತಕ್ಕೂ/ ಹೆಚ್ಚು ಆದೇಶಗಳನ್ನು ಆಡಳಿತ ಕನ್ನಡ ಜಾರಿಗೆ ತರಲು ಹೊರಡಿಸಿದ್ದರೂ ಏನೂ ಪ್ರಯೋಜನವಾಗಿಲ್ಲ. ಸರ್ಕಾರ ಆಡಳಿತ ಕನ್ನಡ ಅನುಷ್ಠಾನಕ್ಕೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಚಿಸಿ ಸಂಪುಟ
ದರ್ಜೆಯ ಅಧ್ಯಕ್ಷರ/ನ್ನು ನೇಮಿಸಿದ್ದರೂ $\frac{3}{4}$
ಅದು ಇಲ್ಲಿಯವರೆಗೂ ಸರಿಯಾಗಿ ಕಾರ್ಯಪ್ರವೃತ್ತವಾಗಿಲ್ಲ. ಅಲ್ಲದೆ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ರಾಜ್ಯ ಸರ್ಕಾರಿ ನೌಕರರಿಗೆ ಆಡಳಿತ ಕನ್ನಡ
ಕಾರ್ಯಶಿಬಿರಗಳನ್ನು ನಡೆXಸುತ್ತಿದ್ದರೂ 1
ಇದೂ ಸಹ ಫಲಕಾರಿಯಾಗಿಲ್ಲ. ಪ್ರತಿ ವರ್ಷ ಆಯವ್ಯಯದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಕನ್ನಡ ಅಭಿವೃದ್ಧಿಗಾಗಿ ಮೀಸಲಾಗಿಟ್ಟಿದ್ದರೂ ಅದು ಸರಿಯಾಗಿ ಸದುಪಯೋಗವಾಗುತ್ತಿಲ್ಲ. ಆದಕಾರಣ
ಸರ್ಕಾರವು/ ಆಡಳಿತದಲ್ಲಿ ಕನ್ನಡವನ್ನು ಬಳಸದ $\frac{1}{4}$
ಅಧಿಕಾರಿ ಮತ್ತು ನೌಕರರ ವಿರುದ್ಧ ಶಿಸ್ತಿನ ಕ್ರಮಕೈಗೊಳ್ಳಬೇಕು. ಕನ್ನಡ ಬಾರದ ಸರ್ಕಾರಿ ಅಧಿಕಾರಿ ಮತ್ತು ನೌಕರರನ್ನು ಕಡ್ಡಾಯವಾಗಿ
ಆಡಳಿತ ಕನ್ನಡ ತರಬೇತಿಗೆ/ ಕಳುಹಿಸಬೇಕು. $\frac{1}{2}$

[ Turn over

ಕನ್ನಡಕ್ಕಾಗಿ ಸರ್ಕಾರದಿಂದ ವೆಚ್ಚವಾಗುತ್ತಿರುವ ಕೋಟ್ಯಾಂತರ ರೂಪಾಯಿಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗವಾಗುವಂತೆ ಎಲ್ಲಾ ಹಂತಗಳಲ್ಲೂ ಕನ್ನಡವನ್ನು ಸಂಪೂರ್ಣವಾಗಿ
$\frac{3}{4}$ ಜಾರಿಗೆ ತರಲು ಕಾಲಬ/ದ್ಧ ಯೋಜನೆಗಳನ್ನು ರೂಪಿಸಬೇಕೆಂದು ಸಲಹೆ ಮಾಡಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ರಾಜ್ಯದಲ್ಲಿ ಈ ಹಿಂದೆ ಹಲವಾರು ವರ್ಷಗಳಿಂದ ಸಕ್ಕರೆ, ಸೀಮೆ ಎಣ್ಣೆ ಮೊದಲಾದ ಪದಾರ್ಥಗಳು ಸಾಕಷ್ಟು ಪ್ರಮಾಣದಲ್ಲಿ
2 ಅಂಗಡಿಗಳಲ್ಲಿX ಮುಕ್ತವಾಗಿ ದೊರಕುತ್ತಿದ್ದು ಜನರಲ್ಲಿ ಒಂದು ರೀತಿಯ ನೆಮ್ಮದಿ ವಾತಾವರಣ ಇತ್ತು. ಆದರೆ ಇತ್ತೀಚೆಗೆ ಅವುಗಳು ಅಂಗಡಿಗಳಲ್ಲಿ ಸರಿಯಾದ ರೀತಿಯಲ್ಲಿ ದೊರೆಯುತ್ತಿಲ್ಲ. ಸರಕಾರದವರು ಅವುಗಳ
$\frac{1}{4}$ ಮೇಲೆ ನಿಯಂತ್ರಣ/ವನ್ನು ತಂದು ಪಡಿತರ ಪದ್ಧತಿಯಲ್ಲಿ ವಿತರಣೆಯನ್ನು ಮಾಡುವ ವ್ಯವಸ್ಥೆಯನ್ನು ತಂದಿರುತ್ತಾರೆ. ಈ ರೀತಿ ಮಾಡುತ್ತಿರುವ ವಿತರಣೆ ಪ್ರಮಾಣವು ಬಹಳ ಕಡಿಮೆಯಾಗಿರುತ್ತದೆ. ಜನರಿಗೆ ಇದು ಪೂರ್ಣ
$\frac{1}{2}$ ಪ್ರಮಾಣದಲ್ಲಿ ಸಾಕಾಗು/ತ್ತಿರುವುದಿಲ್ಲ. ಆದ್ದರಿಂದ ಸರಕಾರದವರು ಜಾಗ್ರತೆಯಾಗಿ ಇದರ ಪ್ರಮಾಣವನ್ನು ಮತ್ತಷ್ಟು ಹೆಚ್ಚಿಸುವುದರ ಜೊತೆಗೆ ಸಕ್ಕರೆ, ಸೀಮೆ ಎಣ್ಣೆಯು ಮುಕ್ತ ಮಾರುಕಟ್ಟೆಯಲ್ಲಿ ಸರಾಗವಾಗಿ ದೊರೆಯುವಂಥ
$\frac{3}{4}$ ಒಂದು ವ್ಯವಸ್ಥೆಯನ್ನು ಮಾ/ಡಬೇಕೆಂದು ಹೇಳುತ್ತೇನೆ.

ರಾಜ್ಯ ಸರ್ಕಾರವು ಗೃಹ ನಿರ್ಮಾಣ ಯೋಜನೆಯನ್ನು ಕೈಗೊಂಡಿರುವುದು ಬಹಳ ಸಂತೋಷದಾಯಕವಾದ ವಿಷಯ. ಈ ಯೋಜನೆಯಿಂದ ಬಹಳವಾಗಿ ಹಿಂದುಳಿದಿರತಕ್ಕಂಥ
ಜನರಿಗೆ, ಅದರಲ್ಲೂ ಕನಿಷ್ಠ ಪ್ರXಮಾಣದ 3
ವರಮಾನ ಬರತಕ್ಕಂಥವರಿಗೆ ಒಂದು ವರದಾನವಾಗಿರುತ್ತದೆ. ಎಷ್ಟೋ ಜನರು ತಾವು ಸಂಪಾದನೆ ಮಾಡಿದ ಹಣದಿಂದ ತಮ್ಮ ಜೀವನವನ್ನು ಸಾಗಿಸುವುದೇ ಕಷ್ಟಕರವಾದ ಈ
ದಿನಗಳಲ್ಲಿ ವಾಸವಾಗಿರಲು ತ/ನ್ನದೇ ಆದ $\frac{1}{4}$
ಒಂದು ಸ್ವಂತ ಮನೆಯನ್ನು ಹೊಂದುವುದು ಬಹಳ ಕಷ್ಟಕರವಾದ ಸಂಗತಿಯಾಗಿರುತ್ತದೆ. ಆದ್ದರಿಂದ ಇಂಥವರಿಗೆ ನೆರವಾಗಲು ಸರ್ಕಾರದವರು ಗೃಹ ನಿರ್ಮಾಣ ಯೋಜನೆಯನ್ನು ಮುಂದುವರೆಸಿಕೊಂಡು
ಹೋಗುವ ವಿಚಾ/ರವು ಸಾಕಷ್ಟು ಮಧ್ಯಮ $\frac{1}{2}$
ವರ್ಗದ ಜನರಿಗೆ ತುಂಬಾ ಸಂತೋಷವನ್ನುಂಟು ಮಾಡಿದೆ. ಇದರ ಜೊತೆಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಯೋಜನೆಯನ್ನು ರೂಪಿಸುವುದರ ಜೊತೆಗೆ ಮತ್ತಷ್ಟು ತೀವ್ರಗೊಳಿಸುವ ಕಡೆಗೆ ಹೆಚ್ಚಿನ
ಗಮನ/ವನ್ನು ಕೊಡಬೇಕೆಂದು ನಾನು $\frac{3}{4}$
ಒತ್ತಾಯ ಮಾಡುತ್ತೇನೆ.

ರಸ್ತೆ ಸಾರಿಗೆ ನಿಗಮದ ಬಗ್ಗೆ ಹೇಳುವುದಾದರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಒದಗಿಸುತ್ತಿರುವ ಸೌಲಭ್ಯವು ಅಷ್ಟೊಂದು ಸಮರ್ಪಕವಾಗಿಲ್ಲ. ಪ್ರತಿದಿನ
ರಾಜ್ಯಾದ್ಯಂತX ಪ್ರಯಾಣ ಮಾಡುತ್ತಿರುವವರ 4
ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದೆ ಇದರಿಂದ ಜನರಿಗಾಗುವ ತೊಂದರೆಗಳನ್ನು ಹೇಳತೀರದಾಗಿದೆ. ಹಳ್ಳಿಗಳಿಂದ ಪಟ್ಟಣ ಪ್ರದೇಶಗಳಿಗೆ ಬರಬೇಕೆಂದರೆ ಸಾಕಷ್ಟು
ಪ್ರಮಾಣದಲ್ಲಿ ಬಸ್/ಗಳ ಸೌಕರ್ಯವಿಲ್ಲ. $\frac{1}{4}$
ರಸ್ತೆ ಸಾರಿಗೆ ನಿಗಮದವರು ಖಾಸಗಿ ಬಸ್ಸುಗಳನ್ನು ರಾಷ್ಟ್ರೀಕರಣಗೊಳಿಸಿದ ಮೇಲೆ ಖಾಸಗಿ

ಬಸ್ಸುಗಳ ಸಂಚಾರವನ್ನು ಸಂಪೂರ್ಣವಾಗಿ
ಸ್ಥಗಿತಗೊಳಿಸಿದ್ದಾರೆ. ಸರ್ಕಾರದವರು
$\frac{1}{2}$ ರಾಷ್ಟ್ರೀಕರಣಗೊಳಿ/ಸಿರುವ ಕಡೆಗಳಲ್ಲಿ ದಿವಸಕ್ಕೆ
ಕೇವಲ ಒಂದೆರಡು ಬಸ್ಸುಗಳನ್ನು
ಓಡಿಸುತ್ತಿರುವುದರಿಂದ ಸಾಮಾನ್ಯ ಜನರಿಗೆ
ಅದರಲ್ಲೂ ಶಾಲಾ ಕಾಲೇಜುಗಳಿಗೆ ಮತ್ತು
ಕಛೇರಿಗಳಿಗೆ ಹೋಗತಕ್ಕವರಿಗೆ ಬಹಳ
$\frac{3}{4}$ ತೊಂದರೆಯುಂಟಾ/ಗುತ್ತದೆ. ಆದ್ದರಿಂದ ರಸ್ತೆ
ಸಾರಿಗೆ ನಿಗಮವು ಹಳ್ಳಿಗಳ ಕಡೆಗಳಲ್ಲಿ ದಿನನಿತ್ಯ
ಓಡಿಸುತ್ತಿರುವ ವಾಹನಗಳ ಸಂಖ್ಯೆಯನ್ನು
ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚಿಸುವ
ಒಂದು ವಿಶೇಷ ಕಾರ್ಯಕ್ರಮವೊಂದನ್ನು
5 ರೂಪಿಸಿಕೊಳ್ಳುXವುದರ ಜೊತೆಗೆ ಈಗ
ಒದಗಿಸುತ್ತಿರುವ ಸೇವೆಯ ಗುಣಮಟ್ಟವನ್ನು
ಉತ್ತಮಪಡಿಸಬೇಕೆಂದು ನಾನು ಸಲಹೆ
ಮಾಡುತ್ತೇನೆ.

ಇನ್ನು ಭೂ ಸುಧಾರಣೆಯನ್ನು
ಕಾರ್ಯಗತಗೊಳಿಸುವುದರಲ್ಲಿ ರಾಜ್ಯ
$\frac{1}{4}$ ಸರ್ಕಾರವು ಸಾಕಷ್ಟು ಪ್ರಗತಿಯ/ನ್ನು
ಸಾಧಿಸಿರುತ್ತದೆಯೆಂದು ಹೇಳುತ್ತಿರುತ್ತಾರೆ. ಆದರೆ
ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ ಈ
ಭೂ ಸುಧಾರಣಾ ಕಾಯಿದೆಯಿಂದ
ಭೂಮಿಯನ್ನು ಕಳೆದುಕೊಂಡ ಭೂ
ಮಾಲೀಕರಿಗೆ ಇದುವರೆಗೂ ಪರಿಹಾರ ಧನ
$\frac{1}{2}$ ದೊರೆತಿಲ್ಲ. ಎ/ಷ್ಟೋ ಕಡೆ ಭೂನ್ಯಾಯ
ಮಂಡಲಿಗಳಲ್ಲಿ ಈ ವಾದಗಳು ಇತ್ಯರ್ಥವಾಗದೆ
ಹಾಗೆಯೇ ಉಳಿದಿದೆ. ಭೂಮಿಯನ್ನು
ಕಳೆದುಕೊಂಡಿರುವ ಅಂಗವಿಕಲರಿಗೆ ಮತ್ತು
ವಿಧವೆಯರಿಗೆ ಆದಷ್ಟು ಜಾಗ್ರತೆ ಪರಿಹಾರ
$\frac{3}{4}$ ಧನವನ್ನು ಕೊಡುವ ಬಗ್ಗೆ/ ಸರ್ಕಾರದ ಆಜ್ಞೆ
ಇದ್ದರೂ ಅವರಿಗೆ ಪರಿಹಾರ ಇನ್ನೂ ಸಿಕ್ಕಿಲ್ಲ.
ಆದ್ದರಿಂದ ಈ ಕಾರ್ಯಕ್ರಮವನ್ನು ತೀವ್ರವಾಗಿ
ಕಾರ್ಯಗತಗೊಳಿಸಬೇಕಾದರೆ ಭೂನ್ಯಾಯ
ಮಂಡಲಿಗಳನ್ನು ಪುನರ್ ರಚಿಸುವ ಸಮಗ್ರ
ಹಾಗೂ ಪರಿಣಾಮಕಾರಿXಯಾದ ಕಾರ್ಯವನ್ನು 6
ನಮ್ಮ ಸರ್ಕಾರದವರು ಕೈಗೊಳ್ಳಬೇಕೆಂದು
ಒತ್ತಾಯಪಡಿಸುತ್ತೇನೆ.

ಇನ್ನು ನಾನು ಶಾಸನ ಸುವ್ಯವಸ್ಥೆಯ ಬಗ್ಗೆ
ಕೆಲವೊಂದು ವಿಚಾರಗಳನ್ನು ಸರ್ಕಾರದ ಆಧ್ಯ
ಗಮನಕ್ಕೆ ತರುವುದಕ್ಕೆ ಅಪೇಕ್ಷಿಪಡುತ್ತೇನೆ.
ಈ/ಗಿನ ರೈತರ ಚಳುವಳಿಯಿಂದ ನಮ್ಮ $\frac{1}{4}$
ದೇಶದಲ್ಲಿ ಹಾಗೂ ನಮ್ಮ ರಾಜ್ಯದಲ್ಲಿ ಅಶಾಂತಿ
ತಲೆದೋರಿದೆ. ಆದ್ದರಿಂದ ಸರ್ಕಾರದವರು
ಮೊದಲು ಈ ಸಮಸ್ಯೆಯನ್ನು
ಬಗೆಹರಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ಶಿಕ್ಷಣದ ವಿಚಾರ/ದಲ್ಲಿ ಹೆಚ್ಚು $\frac{1}{2}$
ಹೇಳಲು ಬಯಸುವುದಿಲ್ಲ. ಮುಂದಿನ
ಪಂಚವಾರ್ಷಿಕ ಯೋಜನೆಯಲ್ಲಿ ಶಿಶುವಿಹಾರ
ಮತ್ತು ಪ್ರಾಥಮಿಕ ಶಾಲೆಗಳನ್ನು ಹೆಚ್ಚು
ಸ್ಥಾಪನೆ ಮಾಡಬೇಕು ಹಾಗೂ ಅವುಗಳಿಗೆ
ಬೇಕಾದ ಕಟ್ಟಡ, ಉಪಕರಣ ಹಾಗೂ
ಉಪಾಧ್ಯಾಯ/ರನ್ನು ಒದಗಿಸುವ ಕಾರ್ಯವನ್ನು $\frac{3}{4}$
ಮಾಡಬೇಕು. ಈಗ ಪ್ರತಿನಿತ್ಯ ಮಕ್ಕಳು ಹೆಚ್ಚಿನ
ಪ್ರಮಾಣದಲ್ಲಿ ಹೆಚ್ಚುತ್ತಿದ್ದು ಅವರುಗಳಿಗೆ
ಸರಿಯಾದ ಶಿಕ್ಷಕರು ಮತ್ತು ಕಟ್ಟಡಗಳು
ಇರುವುದಿಲ್ಲ. ನಮ್ಮ ದಾವಣಗೆರೆ ಮತ್ತು
ಚಿತ್ರದುರ್ಗX ಜಿಲ್ಲೆಗಳಿಗೆ ಕಳೆದ ಒಂದು 7
ವರ್ಷದಿಂದ ಪ್ರಾಥಮಿಕ ಶಾಲೆಗಳಿಗೆ ಮತ್ತು
ಪ್ರೌಢಶಾಲೆಗಳಿಗೆ ಬಹಳಷ್ಟು ಉಪಾಧ್ಯಾಯರನ್ನು
ನೇಮಕ ಮಾಡಬೇಕಾಗಿತ್ತು. ಆದರೆ
ಇದುವರೆಗೂ ಅದರ ಕಡೆಗೆ ಗಮನವನ್ನು
ಕೊಟ್ಟಿಲ್ಲ. ಇದ/ರ ಕಡೆ ಯೋಚನೆ $\frac{1}{4}$

ಮಾಡಬೇಕಾಗುತ್ತದೆ. ಶಾಲೆಗಳಿಗೆ ಸಕಾಲದಲ್ಲಿ
ಹೆಚ್ಚಿನ ಗಮನ ಕೊಡಬೇಕು.

ಇನ್ನು ಆಹಾರದ ವಿಷಯುವಾಗಿ
ಮಾತನಾಡುವುದಾದರೆ ಕಳೆದ ವರ್ಷ ನಮ್ಮ
ರಾಜ್ಯದಲ್ಲಿ ಬಹಳಷ್ಟು ತೊಂದರೆಗಳು
$\frac{1}{2}$ ಉಂಟಾಗಿ/ ಸಂಕಷ್ಟಕ್ಕೆ ಒಳಗಾಗುವ ಪರಿಸ್ಥಿತಿ
ಉಂಟಾಗಿತ್ತು. ಈ ಸಾಲಿನಲ್ಲಿ ಮಳೆಯು
ಸಾಕಷ್ಟು ಕಡಿಮೆ ಪ್ರಮಾಣದಲ್ಲಿ ಬಿದ್ದಿದ್ದರಿಂದ
ಬೆಳೆಯನ್ನು ಬೆಳೆಯಲು ಆಗಿಲ್ಲ. ಆದಕಾರಣ ಈ
ಸಾಲಿನಲ್ಲಿ ಆಹಾರದ ಕೊರತೆ ತುಂಬಾ
$\frac{3}{4}$ ಉಂಟಾಗಿದೆ/ ಎಂದು ಅರ್ಥ ಸಚಿವರ
ವರದಿಯಿಂದ ತಿಳಿದುಬಂದಿದೆ. ಹೋದ
ವರ್ಷಕ್ಕಿಂತ ಈ ವರ್ಷ ಆಹಾರ
ಉತ್ಪಾದನೆಯನ್ನು ಕೇಳಿ ನನಗೆ ತುಂಬಾ
ನೋವುಂಟಾಗಿದೆ. ಇಷ್ಟೊಂದು ರೀತಿಯಲ್ಲಿ
ಆಹಾರ ಉತ್ಪಾದನೆಯಾಗಿದ್ದರೂ ಅಲ್ಲಲ್ಲಿ
8 ಆಹಾರದ ಅXಭಾವ ಉಂಟಾಗಿದೆ. ಇದಕ್ಕೆ
ಕಾರಣವೇನೋ ಗೊತ್ತಾಗಲಿಲ್ಲ. ಇದನ್ನು
ಸರ್ಕಾರವು ತೀವ್ರವಾಗಿ ಗಮನಹರಿಸಬೇಕು.
ಆಹಾರ ಧಾನ್ಯ ವಿತರಣೆಯಲ್ಲಿ ದೋಷವೂ
ಇದ್ದಂತೆ ಕಾಣುತ್ತದೆ. ಉದಾಹರಣೆಗೆ
$\frac{1}{4}$ ಹೇಳುವುದಾದರೆ ಬಳ್ಳಾರಿ, ರಾ/ಯಚೂರು
ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಹಿಂದಿನ ವರ್ಷ
ಆಹಾರದ ಅಭಾವ ತಲೆದೋರಿದ ಅಂಶ
ಸದನಕ್ಕೆ ಮನವರಿಕೆಯಾಗಿರಬೇಕು. ಹಂಚಿಕೆ
ಮತ್ತು ಬೆಲೆಯಲ್ಲಿ ಈ ಜಿಲ್ಲೆಗಳಲ್ಲಿ ಸಾಕಷ್ಟು
$\frac{1}{2}$ ಗೊಂದಲ ಉಂಟಾಗಿ ಸಾಕಷ್ಟು ಗ/ಲಾಟೆಗಳು
ಇಲ್ಲಿ ನಡೆದು ತುಂಬಾ ನಾಗರಿಕರಿಗೆ
ತೊಂದರೆಯುಂಟಾಗಿರುತ್ತದೆ. ಇದು ಇನ್ನು
ಮುಂದೆ ಆಗದಂತೆ ನಮ್ಮ ಕರ್ನಾಟಕ ರಾಜ್ಯದಲ್ಲಿ
ಎಲ್ಲಾ ಜಿಲ್ಲೆಗಳಲ್ಲಿ ಒಂದೇ ರೀತಿಯ ಹಂಚಿಕೆ
ಮತ್ತು ಬೆಲೆಗೆ ಆಹಾರಧಾನ್ಯ ಸಿಗುವಂತೆ/ $\frac{3}{4}$
ಸರ್ಕಾರವು ಕಾರ್ಯಕ್ರಮ ತೆಗೆದುಕೊಳ್ಳಬೇಕು.

ಇನ್ನು ನಿರುದ್ಯೋಗ ಸಮಸ್ಯೆಯ
ವಿಷಯ. ಇಂದು ದೇಶದಲ್ಲಿ ಜನಸಂಖ್ಯೆ ಅತಿ
ವೇಗವಾಗಿ ಬೆಳೆಯುತ್ತಿರುವುದರಿಂದ ಎಷ್ಟೇ
ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗ
ಸಮಸ್ಯೆಯನ್ನು ನಿವಾರಣೆX ಮಾಡಲು 9
ಪ್ರಯತ್ನಪಟ್ಟರೂ ಸಹ ಈ ಸಮಸ್ಯೆ
ಪರಿಹಾರವಾಗಿಲ್ಲ. ಕೇಂದ್ರ ಸರ್ಕಾರವು ಇತ್ತೀಚೆಗೆ
ನಿರುದ್ಯೋಗ ಸಮಸ್ಯೆಯ ವಿಚಾರವಾಗಿ ಒಂದು
ಹೊಸ ಯೋಜನೆಯನ್ನು ಕೈಗೊಂಡಿದೆ. ಇದರ
ಜೊತೆಗೆ ನಮ್ಮ ಸರ್ಕಾರವು ಸಹ ಹೊಸದಾ/ಗಿ $\frac{1}{4}$
ಹೆಚ್ಚು ಹೆಚ್ಚು ಕಾರ್ಖಾನೆಗಳನ್ನು ಪ್ರಾರಂಭ
ಮಾಡುವುದರ ಮೂಲಕ ನಿರುದ್ಯೋಗ
ಸಮಸ್ಯೆಯನ್ನು ನಿವಾರಣೆ ಮಾಡಲು
ಹೊರಟಿರುವುದು ಅತಿ ಸಂತೋಷಕರವಾದ
ಸಂಗತಿ. ಈ ಹೊಸ ಹೊಸ ಕಾರ್ಖಾನೆಗಳು
ಆದಷ್ಟು ಬೇಗನೆ ಪ್ರಾರಂಭ/ವಾದರೆ ಸಾವಿರಾರು $\frac{1}{2}$
ಜನ ನಿರುದ್ಯೋಗಿ ಯುವಕರಿಗೆ ಉದ್ಯೋಗ
ದೊರಕಿ ರಾಜ್ಯದ ಹಾಗೂ ರಾಷ್ಟ್ರದ ನಿರುದ್ಯೋಗ
ಸಮಸ್ಯೆ ನಿವಾರಣೆಯಾದಂತಾಗುತ್ತದೆ ಇಂತಹ
ಉತ್ತಮ ಕೆಲಸಗಳನ್ನು ಮಾಡುವುದರಿಂದ
ದೇಶದ ಹಾಗೂ ರಾಜ್ಯದ/ ಸಂಪತ್ತು ಹೆಚ್ಚಾಗಿ $\frac{3}{4}$
ರಾಷ್ಟ್ರ ಮುಂದುವರಿಯಲು ಸಾಕಷ್ಟು
ಅವಕಾಶವಾಗುತ್ತದೆಂದು ಭಾವಿಸಿ ಇಷ್ಟು ಹೊತ್ತು
ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟ
ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ನಾಲ್ಕಾರು
ಮಾತುಗಳನ್ನು ಮುಗಿಸುತ್ತೇನೆ.X 10